# ಶ್ರೀ ಸುತ್ತೂರು ಮಠ

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 295

**28 ಆಗಸ್ಟ್ 2026 * ಶುಕ್ರವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

## ಗಿಟಾರ್ ವಾದನ



ವಿದ್ವಾನ್ ಅಭಯ್ ನಯಂಪಲ್ಲಿ



ವಿದ್ವಾನ್ ಎಸ್. ಜನಾರ್ದನ್
ವಯೊಲಿನ್



ವಿದ್ವಾನ್ ವಿಜಯ್ ಬಿ. ನಟೇಶನ್
ಮೃದಂಗ



ವಿದ್ವಾನ್ ಶಮಿತ್ ಎಸ್. ಗೌಡ
ಘಟಂ

**ವಿದ್ವಾನ್ ಅಭಯ್ ನಯಂಪಲ್ಲಿಯವರು** ಕರ್ನಾಟಕ ಶಾಸ್ತ್ರೀಯ ಸಂಗೀತಕ್ಕೆ ಗಿಟಾರನ್ನು ಅಳವಡಿಸಿದ ಅಪರೂಪದ ಕಲಾವಿದರು. ಕೇರಳದಲ್ಲಿ ಜನಿಸಿ ಮುಂಬಯಿಯಲ್ಲಿ ಬೆಳೆದ ಇವರು ಸಂಗೀತದ ಕೌಟುಂಬಿಕ ಹಿನ್ನೆಲೆಯಿಂದ ಬಂದವರು. 5ನೆಯ ವರ್ಷದಲ್ಲಿ ತಬಲ ಮತ್ತು ಪಿಯಾನೋ ನುಡಿಸುತ್ತಿದ್ದ ಇವರು ತಾರುಣ್ಯದ ಹೊತ್ತಿಗೆ ಗಿಟಾರ್ ವಾದ್ಯಕ್ಕೆ ಮನಸೋತದ್ದು ಒಂದು ಅಚ್ಚರಿ. ಜಾಸ್ ಮತ್ತು ಬ್ಲೂಸ್ ವಾದ್ಯಮೇಳ ಮತ್ತು ಜಾನ್ ಮೆಕ್‌ಲಾಫ್‌ಲಿನ್, ಜಾಂಗೋ ರೀನ್‌ಹಾಟ್, ಜೋ ಪಾಸ್ ಮೊದಲಾದ ವಿದೇಶಿ ಸಂಗೀತಗಾರರಿಂದ ಪ್ರಭಾವಿತರಾದ ಇವರು ಗಿಟಾರ್ ವಾದನದಿಂದ ಸಂಗೀತ ವಲಯದಲ್ಲಿ ಪರಿಚಿತರಾದರು. ಇವರಿಗೆ ಮ್ಯಾಂಡೊಲಿನ್ ಮಾಂತ್ರಿಕ ಶ್ರೀ ಯು. ಶ್ರೀನಿವಾಸ್‌ರವರ ಮಾರ್ಗದರ್ಶನ ದೊರೆಯಿತು. ಗಿಟಾರ್ ವಾದ್ಯವನ್ನು ಕರ್ನಾಟಕ ಶೈಲಿಯಲ್ಲಿ ನುಡಿಸುವ ಮತ್ತು ಯು. ಶ್ರೀನಿವಾಸ್ ಬಾನಿಯಲ್ಲಿ ಎಲೆಕ್ಟ್ರಿಕ್ ಗಿಟಾರ್ ವಾದ್ಯವನ್ನು ಕಲಿಸುವ ಜಗತ್ತಿನ ಏಕೈಕ ಕಲಾವಿದರಾಗಿದ್ದಾರೆ. ವಿಶ್ವದಾದ್ಯಂತ ಹಲವಾರು ಏಕವ್ಯಕ್ತಿ (ಸೋಲೋ) ಪ್ರದರ್ಶನಗಳನ್ನು ನೀಡಿದ್ದಾರೆ. ಹಲವಾರು ಚಲನಚಿತ್ರಗಳಿಗೆ ಮತ್ತು ವಾಣಿಜ್ಯ ಜಾಹೀರಾತುಗಳಿಗೆ ಸಂಗೀತ ನೀಡಿದ್ದಾರೆ. 'ಸಂಗೀತ ಕಲಾರತ್ನ' ಬಿರುದಿಗೆ ಪಾತ್ರರಾಗಿದ್ದಾರೆ. ಶ್ರೀ ಸಂದೀಪ್ ಚೌಟರೊಡಗೂಡಿ 2021ರಲ್ಲಿ ಸೋಲೋ ಆಲ್ಬಂ ಅನ್ನು ಹೊರತಂದರು. ಇದು 2022ರ ಗ್ರ್ಯಾಮಿ ಪ್ರಶಸ್ತಿಯ ಅಂತಿಮ ಸುತ್ತಿಗೂ ನಾಮಕರಣಗೊಂಡಿತ್ತು. 2023ರಲ್ಲಿ 'ವರ್ಷದ ಗಿಟಾರ್ ಕಲಾವಿದ ಪ್ರಶಸ್ತಿ' ದೊರಕಿತು. 'ಸೆಲೆಬ್ರೇಷನ್' ಗೀತೆಗೆ 'ವರ್ಷದ ಹಾಡು' ಪುರಸ್ಕಾರ ಲಭಿಸಿತು. ಹಿಂದಿ ಚಲನಚಿತ್ರರಂಗದಲ್ಲಿ ಸಂಗೀತ ನಿರ್ದೇಶಕರಾಗಿ, ನಟರಾಗಿ ಛಾಪು ಮೂಡಿಸಿದ್ದಾರೆ. 'ವಾಲ್ಕ್ ಗಿಟಾರ್ಸ್' ಬ್ಯಾಂಡಿನ ರಾಯಭಾರಿಗಳಾಗಿರುವುದು ಇವರ ಮತ್ತೊಂದು ಸಾಧನೆ.

**ವಿದ್ವಾನ್ ಎಸ್. ಜನಾರ್ದನ್‌ರವರು** ಏಳನೆಯ ವರ್ಷದಲ್ಲಿಯೇ ಸಂಗೀತ ಕಲಿಯಲು ಪ್ರಾರಂಭಿಸಿದರು. ವಯೊಲಿನ್ ವಾದನದ ಪ್ರಾರಂಭಿಕ ಶಿಕ್ಷಣವನ್ನು ವಿದುಷಿ ಅನುತ್ತಮಾ ಮುರಳಿಯವರ ಬಳಿ ಪಡೆದರು. ಪ್ರಸ್ತುತ ಪದ್ಮಶ್ರೀ ಶ್ರೀಮತಿ ಎ. ಕನ್ಯಾಕುಮಾರಿಯವರ ಬಳಿ ಉನ್ನತ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಆಕಾಶವಾಣಿ ಮತ್ತು ದೂರದರ್ಶನಗಳ 'ಎ' ಶ್ರೇಣಿಯ ಕಲಾವಿದರು. ಕಳೆದ ಹತ್ತಾರು ವರ್ಷಗಳಿಂದಲೂ ಸೋಲೋ ಹಾಗೂ ಪಕ್ಕವಾದ್ಯಗಾರರಾಗಿ ನಾಡಿನಾದ್ಯಂತ ಖ್ಯಾತಿ ಪಡೆದಿದ್ದಾರೆ. 2023ರಲ್ಲಿ ಅಮೆರಿಕಕ್ಕೆ ಭೇಟಿ ನೀಡಿ ಸಂಗೀತ ಕಾರ್ಯಕ್ರಮ ಪ್ರಸ್ತುತಿ ಪಡಿಸಿ ಶ್ರೋತೃಗಳ ಗೌರವಕ್ಕೆ ಪಾತ್ರರಾಗಿದ್ದಾರೆ.

**ವಿದ್ವಾನ್ ವಿಜಯ್ ಬಿ. ನಟೇಶನ್‌ರವರು** ಇಂದು ಅತ್ಯಂತ ಬೇಡಿಕೆಯಲ್ಲಿರುವ ಉದಯೋನ್ಮುಖ ಕಲಾವಿದರು. ಇವರು ಶ್ರೀ ಟಿ.ಎಸ್. ನಂದಕುಮಾರ್ ಮತ್ತು ಸಂಗೀತ ಕಲಾವಿಭೂಷಣ, ಸಂಗೀತ ಕಲಾನಿಧಿ ಶ್ರೀ ಟಿ.ವಿ. ಗೋಪಾಲಕೃಷ್ಣನ್‌ರವರ ಬಳಿ ಶಿಷ್ಯವೃತ್ತಿ ಮಾಡಿದ್ದಾರೆ. ಕಿರಿಯ ವಯಸ್ಸಿನಲ್ಲಿಯೇ ಆಕಾಶವಾಣಿಯಲ್ಲಿ ಅತ್ಯುತ್ತಮ ಶ್ರೇಣಿ ಪಡೆದರು. ಕೇಂದ್ರ ಸರ್ಕಾರದ ಶಿಷ್ಯವೇತನ ಪಡೆದವರು. ಟೆಡ್ ಎಕ್ಸ್ ವಿಶಿಷ್ಟ ವೇದಿಕೆಯಲ್ಲಿ ಭಾಷಣ ಮತ್ತು ಪ್ರಾತ್ಯಕ್ಷಿಕೆ ನೀಡಿದ್ದಾರೆ. ಇವರ ಪ್ರತಿಭೆ ಮತ್ತು ವಿದ್ವತ್ತುಗಳನ್ನು ಗಮನಿಸಿ ಕಂಚಿ ಕಾಮಕೋಟಿ ಮಠದಿಂದ ಆಸ್ಥಾನ ವಿದ್ವಾನ್ ಪ್ರಶಸ್ತಿ ನೀಡಲಾಗಿದೆ. ಕೃಷ್ಣ ಗಾನಸಭಾ, ಮದರಾಸ್ ಮ್ಯೂಸಿಕ್ ಅಕಾಡೆಮಿ, ನಾರದ ಗಾನಸಭಾ ಮೊದಲಾದ ಪ್ರತಿಷ್ಠಿತ ಸಂಸ್ಥೆಗಳಿಂದ ಹತ್ತಾರು ಪ್ರಶಸ್ತಿಗಳು ಲಭಿಸಿವೆ. ಅಖಿಲ ಭಾರತ ಆಕಾಶವಾಣಿಯ ರಾಷ್ಟ್ರೀಯ ಸಂಗೀತ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದಿರುವುದು ಮತ್ತೊಂದು ಗಣನೀಯ ಸಾಧನೆ.

**ವಿದ್ವಾನ್ ಶಮಿತ್ ಎಸ್. ಗೌಡರವರು** ವಿದ್ವಾನ್ ಎಚ್.ಎಲ್. ಶಿವಶಂಕರಸ್ವಾಮಿ ಮತ್ತು ವಿದ್ವಾನ್ ಗಿರಿಧರ ಉಡುಪರವರುಗಳ ಶಿಷ್ಯರು. ಕರ್ನಾಟಕ ರಾಜ್ಯಮಟ್ಟದ ತಾಳವಾದ್ಯ ಪರೀಕ್ಷೆಗಳಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ವಿದ್ಯಾರ್ಥಿವೇತನ ಪಡೆದ ಪ್ರತಿಭಾನ್ವಿತರು. ಹಲವಾರು ಪ್ರತಿಷ್ಠಿತ ಸಂಗೀತ ವೇದಿಕೆಗಳಲ್ಲಿ ಘಟಂ ವಾದನವನ್ನು ಪ್ರಸ್ತುತಿ ಪಡಿಸಿದ್ದಾರೆ. ಮದ್ರಾಸ್ ಮ್ಯೂಸಿಕ್ ಅಕ್ಯಾಡೆಮಿ ಆಯೋಜಿಸಿದ್ದ 'ಸ್ಪಿರಿಟ್ ಆಫ್ ಯುವಜನೋತ್ಸವ'ದಲ್ಲಿ ಭಾಗವಹಿಸಿದ್ದರು. ವೃತ್ತಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್, ಪ್ರವೃತ್ತಿಯಲ್ಲಿ ಕಲಾವಿದರು.

## ಬೆಳದಿಂಗಳ ಸಂಗೀತ 296

**26 ಸೆಪ್ಟೆಂಬರ್ 2026**

**ಗಾಯನ**

**ವಿದ್ವಾನ್ ಅನಿರುದ್ಧ್ ಐತಾಳ್**

**ಹಾರ್ಮೋನಿಯಂ**

**ಪಂ. ವೀರಭದ್ರಯ್ಯ ಹಿರೇಮಠ**





**ತಬಲ**

**ಪಂ. ರವೀಂದ್ರ ಯಾವಗಲ್**

**ಫೋನ್: 0821–2548221, 2548223 * ಇಮೇಲ್: sutturmath@jssonline.org**